ಗಂಡ ಹೆಂಡತಿ ಪ್ರವಾಸಕ್ಕೆ ಹೋಗಿದ್ದರು. ಒಂದು ದಿನ ಅವರು ಪ್ರಸಿದ್ಧ ದೇವಾಲಯದ ಬಳಿಗೆ ಬಂದರು. ಅವರನ್ನು ನೋಡಿದ ಭಿಕ್ಷುಕನೊಬ್ಬ ಎದ್ದುನಿಂತು ಭಿಕ್ಷೆ ಬೇಡಿದ. ಗಂಡ ಅವನಿಗೆ ಚಿಲ್ಲರೆ ಹಾಕಲು ಜೇಬಿಗೆ ಕೈಹಾಕಿದ. ಕೂಡಲೇ ಭಿಕ್ಷುಕ ಹರಸಿದ, 'ಏಳೇಳು ಜನ್ಮಕ್ಕೂ ನೀವು ಪತಿ ಪತ್ನಿಯಾಗಿರಿ'. ಗಂಡ ಕೂಡಲೇ ತನ್ನ ಜೇಬಿನಿಂದ ಖಾಲಿ ಕೈಯನ್ನು ಹೊರ ತೆಗೆದು ಮುಂದಕ್ಕೆ ಹೋದ!

★★★

ವಕೀಲರು: ನಿಮ್ಮ ಗಂಡ ಹೇಗೆ ಸತ್ತರು?
ಮಹಿಳೆ: ವಿಷ ಸೇವನೆಯಿಂದ.
ವಕೀಲರು: ನಿಮ್ಮ ಗಂಡನ ಶರೀರದಲ್ಲಿ ಈ ಗಾಯದ ಗುರುತುಗಳು ಹೇಗಾದವು?
ಮಹಿಳೆ: ಅವರು ವಿಷವನ್ನು ಕುಡಿಯುವುದಿಲ್ಲವೆಂದು ಹಟ ಹಿಡಿದಿದ್ದರು!

★★★

ಒಬ್ಬ ಮೆಕ್ಯಾನಿಕ್ ವೈದ್ಯರೊಬ್ಬರ ಕಾರನ್ನು ರಿಪೇರಿ ಮಾಡಿ ಎರಡು ಸಾವಿರ ರೂಪಾಯಿ ಬಿಲ್ ಅನ್ನು ಅವರ ಮುಖಕ್ಕೆ ಹಿಡಿದ. ವೈದ್ಯರು ಗಾಬರಿಯಿಂದ ಕೇಳಿದರು, 'ಅಲ್ಲ, ಅರ್ಧ ಗಂಟೆ ಕೆಲಸಕ್ಕೆ ಇಷ್ಟು ಬಿಲ್ಲಾ? ನಾನು ಒಂದು ಗಂಟೆ ಟೆಸ್ಟ್‌ಗೂ ಇಷ್ಟು ತಗೋಳಲ್ಲ. 'ಸಾರ್, ನಿಮ್ಮ ಬಳಿ ಮನುಷ್ಯನ ಹಳೆಯ ಮಾಡಲ್ಲುಗಳೇ ಬರ್ತವೆ. ಅದೇ ಮೂಗು, ಅದೇ ಕಿವಿ, ಅದೇ ಹೃದಯ, ಅದೇ ಮೂತ್ರಪಿಂಡ, ಎಲ್ಲಾ ಅದೇಅದೇ. ಆದರೆ ನನ್ನ ಹತ್ರ ಬರುವ ಕಾರುಗಳೆಲ್ಲಾ ಹೊಸಹೊಸ ಮಾಡೆಲ್‌ಗಳು. ನಾನು ನಿಮಗಿಂತ ಹೆಚ್ಚು ಟೆಸ್ಟ್ ಮಾಡಿ, ರಿಪೇರಿ ಮಾಡಬೇಕಾಗುತ್ತೆ' ಎಂದು ನಕ್ಕ ಮೆಕ್ಯಾನಿಕ್.

★★★

ಕುಡುಕ ಗಂಡ ನಡುರಾತ್ರಿಯಲ್ಲಿ ತೂರಾಡುತ್ತಾ ಮನೆಗೆ ಬಂದಾಗ ಹೆಂಡತಿ ರೇಗಿದಳು.
ಹೆಂಡತಿ: ಮತ್ತೆ ಕುಡಿದುಕೊಂಡು ಬಂದಿದ್ದೀರಾ? ಕಾರನ್ನು ಎಲ್ಲಿ ಬಿಟ್ಟು ಬಂದ್ರಿ?
ಗಂಡ: ಕಾರ್ ಸ್ಟಾರ್ಟ್ ಆಗಲಿಲ್ಲ, ಅದರ ಇಂಜಿನ್‌ನಲ್ಲಿ ನೀರು ಸೇರಿಕೊಂಡಿತ್ತು.
ಹೆಂಡತಿ: ಮಳೆಯೇ ಇಲ್ಲವಲ್ಲ? ನೀರು ಹೇಗೆ ಇಂಜಿನ್‌ನೊಳಗೆ ಹೋಯ್ತು?
ಗಂಡ: ಕಾರು ಕೆರೆಯೊಳಗೆ ಹೋಗಿ ನಿಂತಿದೆ! (ಹೀಗೆಂದ ಕೂಡಲೇ ಆತ ಓಲಾಡಿ, ಕುಸಿದು ಬಿದ್ದ)

★★★

ಒಂದು ಜಾತ್ರೆ ನಡೆಯುತ್ತಿತ್ತು. ಅಕಸ್ಮಾತ್ ಅಲ್ಲಿ ಇಬ್ಬರು ಸ್ನೇಹಿತರು ಭೇಟಿಯಾದರು. ಇಬ್ಬರೂ ತುಂಬಾ ಗಾಬರಿಗೊಂಡಿದ್ದರು. ಇಬ್ಬರ ಪ್ರೇಯಸಿಯರು ಆ ಜಾತ್ರೆಯಲ್ಲಿ ತಪ್ಪಿಸಿಕೊಂಡಿದ್ದರು. ಕಡೆಗೆ ಇಬ್ಬರೂ ಸೇರಿ ಅವರನ್ನು ಹುಡುಕಲು ನಿರ್ಧರಿಸಿದರು.



ಮಹಿಳೆಯ ಭಕ್ತಿಗೆ ಮೆಚ್ಚಿದ ದೇವರು ಪ್ರತ್ಯಕ್ಷನಾಗಿ 'ನಿನ್ನ ಭಕ್ತಿಗೆ ಮೆಚ್ಚಿದೆ. ನಿನಗೆ ಬೇಕಾದ ಐದು ವರಗಳನ್ನು ಕೇಳಿಕೋ' ಎಂದು ಹೇಳಿದ.
ಮಹಿಳೆ 5 ವರಗಳನ್ನು ಕೇಳಿದಳು:
ನನ್ನ ಗಂಡ ನಾನಿಲ್ಲದೆ ಎಲ್ಲೂ ಹೋಗಬಾರದು!
ನಾನು ಅವರ ಪಕ್ಕದಲ್ಲಿದ್ದಾಗ ಮಾತ್ರ ಅವರಿಗೆ ನಿದ್ರೆ ಬರಬೇಕು!
ನನ್ನ ಗಂಡನ ಬದುಕಿನಲ್ಲಿ ನನಗಿಂತ ಮಹತ್ವದ್ದು ಏನಿರಬಾರದು!
ಬೆಳಿಗ್ಗೆ ಅವರಿಗೆ ಎಚ್ಚರವಾದಾಗ ಅವರು ಮೊದಲು ನನ್ನನ್ನೇ ನೋಡಬೇಕು!
ಒಂದು ವೇಳೆ ನನಗೆ ಒಂದು ಚಿಕ್ಕ ಗಾಯವಾದರೂ, ಅವರು ನೋವಿನಿಂದ ನರಳಬೇಕು!
ದೇವರು 'ತಥಾಸ್ತು!' ಎಂದ. ಕೂಡಲೇ ಆ ಮಹಿಳೆ ಸ್ಮಾರ್ಟ್ ಫೋನಾಗಿ ಬದಲಾದಳು!

ಒಬ್ಬ: ನಿನ್ನ ಗರ್ಲ್ ಫ್ರೆಂಡ್ ಹೇಗಿದ್ದಾಳೆ?
ಇನ್ನೊಬ್ಬ: ಐದು ಅಡಿ ಎರಡು ಇಂಚು ಎತ್ತರ, ಉದ್ದ ಜಡೆ, ಕಪ್ಪು ಕಣ್ಣುಗಳು, ತುಂಬಾ ಸ್ವೀಟಾಗಿ, ಸ್ಮಾರ್ಟ್ ಇದ್ದಾಳೆ.
ಒಬ್ಬ: ಹಾಗಾದರೆ, ನಿನ್ನ ಗರ್ಲ್ ಫ್ರೆಂಡನ್ನೇ ಮೊದಲು ಹುಡುಕೋಣ, ಬಾ!

★★★

ವಿವಾಹಿತ ಮಹಿಳೆಯರು ಹೇಳುವ ದೊಡ್ಡ ಸುಳ್ಳು 'ನಮ್ ಯಜಮಾನ್ರನ್ನ ಕೇಳ್ಬೇಕು ಆಗುತ್ತಾ ಅಂತ'.

ವಿವಾಹಿತ ಗಂಡಸರು ಹೇಳುವ ದೊಡ್ಡ ಸುಳ್ಳು 'ಅವಳನ್ನೇನು ಕೇಳೋದು'!

★★★

ಹುಡುಗ: ನಮ್ಮ ಪ್ರೀತಿ ಬಗ್ಗೆ ಮನೇಲಿ ಮೆಲ್ಲಗೆ ಹೇಳ್ಬಿಟ್ಟೆ
ಹುಡುಗಿ: ವ್ಹಾವ್! ಆಮೇಲ್ ಏನಾಯ್ತು?
ಹುಡುಗ: ಆಗೋದೇನು? ಮೆಲ್ಲಗೆ ಹೇಳಿದ್ರಿಂದ ಯಾರಿಗೂ ಕೇಳಿಸ್ಲಿಲ್ಲ. ಬಚಾವಾಗ್ಬಿಟ್ಟೆ.

(ಸಂಗ್ರಹ) ಡಿ.ಎನ್. ಶ್ರೀನಾಥ್, ಶಿವಮೊಗ್ಗ